ಇಂದು ದಿ:**29-11-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎಸ್ ವಕೀಲರಿಂದ ವಾದಿಗಳ ಪರಃ**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತ್ತಿದ್ದೇನೆ. ನಾನು ಕುಮಾರಪಟ್ಟಣದಲ್ಲಿ ವಾಸ ಇರುತ್ತೇನೆ. ನಾನು ಕಳೆದ 8 ವರ್ಷಗಳಿಂದ ಕುಮಾರ ಪಟ್ಟಣದಲ್ಲಿ ವಾಸ ಇದ್ದೇನೆ. 1 ನೇ ವಾದಿ ನನ್ನ ಅಣ್ಣ. ವಾದಿಯರು ಏನು ದಾವೆ ಮಾಡಿದ್ದಾರೆ ಎಂದು ಮಾಹಿತಿ ಇದೆ. ಕರಡಿ ಭರಮಪ್ಪ ನನ್ನ ತಂದೆ. ನನ್ನ ತಾಯಿಯ ಹೆಸರು ಗುತ್ಯಮ್ಮ ಎಂದರೆ ಸರಿ. ನಮ್ಮ ತಂದೆ ತಾಯಿಗೆ 1 ವಾದಿ, ಗಂಗವ್ವ, ವನಜಾಕ್ಷಮ್ಮ, ಗುಡ್ಡಪ್ಪ, ಮಲ್ಲಪ್ಪ ಮತ್ತು ನಾನು ಮಕ್ಕಳು ಎಂದರೆ ಸರಿ. ಗುಡ್ಡಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಯರು ಅವರ ವಾರಸುದಾರರು ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪ ಈತನಿಗೆ ನನ್ನ ತಂದೆ, ನೀಲಪ್ಪ ಮತ್ತು ನಿಂಗಪ್ಪ ಎಂಬ ಮೂರು ಜನ ಮಕ್ಕಳು ಎಂದರೆ ಸರಿ. ನಿಂಗಪ್ಪ ಎನ್ನುವವರು ದತ್ತಕ ಹೋಗಿದ್ದಾರೆ ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ.

ಮಲ್ಲಪ್ಪ ತೀರಿಕೊಂಡ ನಂತರ, ನನ್ನ ತಂದೆ ಮತ್ತು ನೀಲಪ್ಪ ಒಟ್ಟು ಕುಟುಂಬದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ಅಜ್ಜ ತೀರಿಕೊಂಡ ನಂತರ ವಿಭಾಗ ಆಯಿತು ಎಂದು ಹೇಳುತ್ತಾರೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ನೀಲಪ್ಪ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಇಲ್ಲ, ಜಮೀನು ಮಾತ್ರ ಪಿತ್ರಾರ್ಜಿತ ಆಸ್ತಿ ಎಂದು ಹೇಳುತ್ತಾರೆ. 1999 ರಲ್ಲಿ ಪಂಚಾಯಿತಿ ಮುಖಾಂತರ ನನ್ನ ತಂದೆ ಇದ್ದಾಗ ಪಾಲುವಿಭಾಗ

ಆಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿದ್ದೇನೆ. ನೊಂದಾಯಿತ ಪಾಲುವಿಭಾಗ ಪತ್ರ ಆಗಿರುವುದಿಲ್ಲ, ಸಾಕ್ಷಿ ಹಿರಿಯರ ಮುಂದೆ ಆಗಿರುತ್ತದೆ ಎಂದು ಹೇಳುತ್ತಾರೆ. ಬಣಕಾರ್ ಹಾಲಪ್ಪ, ಎಸ್.ವಿ ನಾಗೇಂದ್ರಪ್ಪ ಮತ್ತು ಗುತ್ಯಪ್ಪ ಎನ್ನುವವರು ಸಹಿ ಮಾಡಿದ್ದಾರೆ, ಅದರಲ್ಲಿ ಗುತ್ಯಪ್ಪ ತೀರಿಕೊಂಡಿದ್ದಾರೆ.

ದಿನಾಂಕಃ15-03-1997 ರಲ್ಲಿ ನಾನು ಪೋಲೀಸ್ ಇಲಾಖೆಗೆ ಸೇವೆಗೆ ಸೇರಿಕೊಂಡೆನು. ನಾನು ಕೆಲಸಕ್ಕೆ ಸೇರುವ ಸಮಯದಲ್ಲಿ ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ವಿಭಾಗ ಆಗಿತ್ತು ಎಂದು ಹೇಳುತ್ತಾರೆ. ನನ್ನ ಮದುವೆ 1999 ರಲ್ಲಿ ಆಗಿರುತ್ತದೆ. ನನ್ನ ಮದುವೆ ಆಗುವ ಸಮಯದಲ್ಲಿ ನಾವೆಲ್ಲರೂ ಒಟ್ಟಿಗೆ ಇದ್ದೇವು ಎಂದರೆ ಸರಿಯಲ್ಲ. ಸಾಕ್ಷಿ 1992 ರ ಸುಮಾರಿನಲ್ಲಿಯೇ ಬೇರೆ ಆಗಿದ್ದೇವು ಎಂದು ಹೇಳುತ್ತಾರೆ. ನಾನು ಕೆಲಸಕ್ಕೆ ಸೇರಿಕೊಂಡಾಗ ನನ್ನ ಸಂಬಳ ಸುಮಾರು 3 ಸಾವಿರ ಇತ್ತು. ನಾನು ಕೆಲಸಕ್ಕೆ ಸೇರಿದ ನಂತರ, ಮೊದಲು ಬೆಂಗಳೂರಿನಲ್ಲಿ ಇದ್ದು ನಂತರ ಮಲೇಮಾದೇಶ್ವರ ಬೆಟ್ಟದಲ್ಲಿ ಕರ್ತವ್ಯ ಮಾಡಿರುತ್ತೇನೆ. ಬೆಂಗಳೂರಿನಲ್ಲಿ 4 ವರ್ಷ ಇದ್ದೇನು, ಮಲೇಮಾದೇಶ್ವರ ಬೆಟ್ಟದಲ್ಲಿ 5 ವರ್ಷ ಇದ್ದೇನು. ಆ ಸಮಯದಲ್ಲಿ ಜಮೀನಿನ ಉಸ್ತುವಾರಿಯನ್ನು ನನ್ನ ತಂದೆ ಮತ್ತು 1 ನೇ ವಾದಿ ಮಾಡುತ್ತಿದ್ದರು. ನನ್ನ ಮದುವೆ ಆಗುವವರೆಗೂ ವಾದಿಯರ ಮತ್ತು ನನ್ನ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ.

ನಮ್ಮ ಮತ್ತು ವಾದಿಯರ ನಡುವೆ ಯಾವುದೇ ನೊಂದಾಯಿತ ಪಾಲುವಿಭಾಗಪತ್ರ ಆಗಿಲ್ಲ ಎಂದರೆ ಸರಿ. ಶೆಡ್ಯೂಲ್ ಎ ಐಟಂ ನಂಬರ್ 1 ಆಸ್ತಿಯನ್ನು ಯಾರು ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ 4 ನೇ ಪ್ರತಿವಾದಿ ಅದನ್ನು

ಲಾವಣಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಪಾಲುವಿಭಾಗ ಆದ ಪ್ರಕಾರ ಈ ಜಮೀನು 4 ನೇ ಪ್ರತಿವಾದಿಗೆ ಹೋಗಿರುತ್ತದೆ. ಸರ್ವೆ ನಂಬರ್ 33/4 ಇದನ್ನು 6 ನೇ ಪ್ರತಿವಾದಿ ನೋಡಿಕೊಳ್ಳುತ್ತಾನೆ. ಸಾಕ್ಷಿ ನನಗೆ ಮತ್ತು ನನ್ನ ತಮ್ಮನಿಗೆ ಈ ಜಮೀನು ಬಂದಿದೆ ಎಂದು ಹೇಳುತ್ತಾರೆ.

ಸರ್ವೆ ನಂಬರ್ 37/3 ಪಿ1, 24 ನೇ ಗುಂಟೆ ಇದು 1 ನೇ ವಾದಿಯ ಹಿಸ್ಸೆಗೆ ಹೋಗಿದೆ. ಶೆಡ್ಯೂಲ್ ಎ, ಐಟಂ ನಂಬರ್ 4 ಸರ್ವೆ ನಂಬರ್ 33/9 ಇದನ್ನು ನಾನು ಸಾಲ ಮಾಡಿ ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ. ನಾನು ಈ ಜಮೀನು ಖರೀದಿ ಮಾಡಲು ನಮ್ಮ ಇಲಾಖೆಯಿಂದ ಪರಾವನಿಗೆ ಪಡೆದಿದ್ದೇನು. ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಶಿವಮೊಗ್ಗದಲ್ಲಿ ಇದ್ದಾಗ ಪರಾವನಿಗೆ ಪಡೆದಿದ್ದು, ಈಗ ಬಹಳ ದಿನಗಳು ಆದ ಕಾರಣ, ಹಾಜರುಪಡಿಸಲು ತೊಂದರೆ ಇದೆ ಎಂದು ಹೇಳುತ್ತಾರೆ. ಈ ಆಸ್ತಿ ನನ್ನ ಹೆಂಡತಿಯ ಹೆಸರಿನಲ್ಲಿ ಇದೆ. ನಿಮ್ಮ ಹೆಸರಿನಲ್ಲಿ ಖರೀದಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಹೆಂಡತಿಯ ತಂದೆ ಸಹ ಹಣದ ಸಹಾಯ ಮಾಡಿದ್ದು, ನಾನು ಆ ಸಮಯದಲ್ಲಿ ಬಿಹಾರದಲ್ಲಿ ಇದ್ದ ಕಾರಣ, ಕ್ರಯಪತ್ರ ನನ್ನ ಹೆಸರಿಗೆ ಮಾಡಿಕೊಳ್ಳಲಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲೆಯ ಕುರಿತು ಕ್ರಯದ ಮಾತುಕತೆ ಆಗಬೇಕಾದರೆ ನಾನು ಕರ್ತವ್ಯದ ಮೇಲೆ ಇದ್ದೇನು.

ಪಂಚಾಯಿತಿಯಲ್ಲಿ ಆದ ಪಾಲುವಿಭಾಗ ಪತ್ರವನ್ನು ನೊಂದಣಿ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಕರ್ತವ್ಯದ ಮೇಲೆ ಹೊರಗಡೆ ಇದ್ದೇನು, 1 ನೇ ವಾದಿ ನೊಂದಣಿ ಮಾಡಿಸುತ್ತಾನೆ ಎಂದು ತಿಳಿದು, ಸುಮ್ಮನೆಯಾದೇನು ಎಂದು ಹೇಳುತ್ತಾರೆ. ನಾನು ಹೇಳುವ ಪಂಚಾಯಿತಿಯಲ್ಲಿ ಆದ ಪಾಲುವಿಭಾಗ ಸಮನಾಗಿ ಆಗಿಲ್ಲ ಎಂದರೆ ಸರಿಯಲ್ಲ. ಎಲ್ಲರಿಗೂ ಸಮ ಹಿಸ್ಸೆ

ಹೋಗಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಾದಿಯರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.